ಮಕ್ಕಳಿಗಾಗಿ ಬೈಬಲ್
ಅರ್ಪಿಸುವ

# ಯೇಸುವು ಕುರುಡನನ್ನು ಗುಣ ಪಡಿಸಿದ್ದು



ಬರಹಗಾರರು: Edward Hughes
ಚಿತ್ರಲೇಖಕರು: Alastair Paterson; Janie Forest
ಅಳವಡಿಸುವವರು: Ruth Klassen
ಪದ್ಮಾ ಸ್ಮೈಲೇಸ್: Vinay Shirol
ತಯಾರಕರು: Bible for Children
www.M1914.org

BFC
PO Box 3
Winnipeg, MB R3C 2G1
Canada

©2020 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಯೆರಿಕೋ ಹತ್ತಿರ ರಸ್ತೆಯ ಬದಿಯಲ್ಲಿ ಕುರುಡನಾದ ಬಾರ್ತಿಮಯನು ಕುಳಿತ್ತಿದ್ದನು. ಆತನು ಕುರುಡನಾಗಿದ್ದರಿಂದ ಅವನು ಕೆಲಸವನ್ನು ಮಾಡುವುದಕ್ಕೆ ಆಗುತ್ತಿರಲಿಲ್ಲ. ಆದುದ್ದರಿಂದ ಅವನು ಭಿಕ್ಷೆಯನ್ನು ಬೇಡುತ್ತಿದ್ದನು. ರಸ್ತೆಯಲ್ಲಿ ಹೋಗುವವರು ಅವನಿಗೆ ಏನಾದರು ಕೊಡುತ್ತಿದ್ದರು.



ಒಂದು ದಿನ ದಾರಿಯಲ್ಲಿ ಅನೇಕರು ನಡೆದಾಡುವಂತ ಶಬ್ದವನ್ನು ಬಾರ್ತಿಮಯನು ಕೇಳಿಸಿಕೊಂಡನು, ಅದು ಅಪರೂಪವಾದ ಶಬ್ದವಾಗಿತ್ತು ಆದು ಏನೆಂದು ಆ ಕುರುಡನು ತಿಳಿದುಕೊಂಡನು. ಅದೇನೆಂದರೆ, ನಜರೇತಿನ ಯೇಸುವು ಆ ಮಾರ್ಗದಲ್ಲಿ ಹೋಗುತ್ತಿದ್ದನು. ಆತನನ್ನು ನೋಡುವುದಕ್ಕೂ ಮತ್ತು ಆತನ ಮಾತನ್ನು ಕೇಳುವುದಕ್ಕೂ ಜನರು ಆತನ ಹಿಂದೆ ಹೋಗುತ್ತಿದ್ದರು.





ಯೇಸುವೇ ದಾವೀದ ಕುಮಾರನೇ ನನ್ನನ್ನು ಕರುಣಿಸು ಎಂದು ಬಾರ್ತಿಮಯನು ಕೂಗಿದನು, ಏಕೆ ಅವನು ಹಾಗೆ ಕೂಗಿದನು? ಅವನಿಂದ ಏನಾದರೂ ಸಹಾಯವನ್ನು ಬಯಸಿದ್ದರಿಂದಲೋ? ಒಂದುವೇಳೆ ಆತನು ಆದ್ಭುತವನ್ನು ಮಾಡಿದ್ದು ಕೇಳಿದ್ದರಿಂದ ಆ ರೀತಿಯಾಗಿ ಕೂಗಿರಬಹುದು. ಮತ್ತು ಪುನ: ಯೇಸುವೇ ದಾವೀದ ಕುಮಾರನೇ ನನ್ನನ್ನು ಕರುಣಿಸು ಎಂದು ಬಾರ್ತಿಮಯನು ಕೂಗಿದನು. ಆ ಕೂಗಿನಲ್ಲಿ ನಿರೀಕ್ಷಯು ಕಾಣಲ್ಪಡುತ್ತಿತ್ತು.



ಬಾರ್ತಿಮಯನು ಒಂದು
ಸತ್ಯವನ್ನು ತಿಳಿದುಕೊಂಡಿದ್ದನು
ಆದೇನೇಂದರೆ ಈಗ ನಾನು
ಅವನಿಂದ ಸಹಾಯವನ್ನು
ಕಾಣದಿದ್ದರೆ ಎಂದಿಗೂ
ಕಾಣಲಾರೆ ಎಂದು, ಮತ್ತೆ
ಯೇಸುವು ಆ ಮಾರ್ಗದಲ್ಲಿ
ಹೋಗಲಾರನೆಂದು ಆತನು
ತಿಳಿದ್ದಿದನು.



ಬಾರ್ತಿಮಯನು
ಯೇಸುವಿನ ಹತ್ತಿರ
ಹೋಗಲು ಬಯಸಿದನು
ಆದರೆ ಜನರು ಅದಕ್ಕೆ
ಅವಕಾಶವನ್ನು ಮಾಡಿ
ಕೊಡಲ್ಲಿಲ್ಲ. ಅವನನ್ನು
ಸುಮ್ಮನಿರುವಂತೆ
ಗದರಿಸಿದರು.



ಬಾರ್ತಿಮಯನು ಯಾರ ಮಾತನ್ನು ಕೇಳದ
ಪುನ: ಹಾಗೆ ಮಾಡಿದನು. ಯೇಸು ಅದನ್ನು ಕೇಳಿ
ಅವನನ್ನು ತನ್ನ ಹತ್ತಿರ ಕರೆದುಕೊಂಡು ಬನ್ನಿರಿ
ಎಂದು ಅಪ್ಪಣೆಯನ್ನು ಕೊಟ್ಟನು. ಶಿಷ್ಯರು ಬಂದು
ದೈರ್ಯವಾಗಿರು ಯೇಸು
ನಿನ್ನನ್ನು ಕರೆಯುತ್ತಾನೆ
ಅಂದರು.



ಅವನಲ್ಲಿರುವಂತ ವಸ್ತ್ರವನ್ನು ಬೀಸಾಡಿ ಯೇಸುವಿನ ಬಳಿಗೆ ಹೋದನು.



ಯೇಸು ಅವನನ್ನು ನೋಡಿ ನಾನು ನಿನಗೇನು ಮಾಡಬೇಕೆಂದು ಕೊರುತ್ತೀಯ ಅಂದನು? ಅವನ ಉತ್ತರ ಏನಾಗಿತ್ತು? ಅವನಿಗೆ ಬೇಕಾಗಿದ್ದು ಹಣ, ವಸ್ತ್ರ, ಒಳ್ಳೆಯ ಮನೆಯಾಗಿತ್ತಾ?



ಇಲ್ಲಾ! ಅವನು ಯೇಸುವಿನಿಂದ ಹಣ, ಬಂಗಾರ
ಮತ್ತು ಯಾವ ವಸ್ತ್ರವನ್ನು ಕೇಳಲಿಲ್ಲ. ಅವನು
ಏನನ್ನು ಕೇಳಿದನೆಂದು
ನಿಮಗೆ ಗೊತ್ತಾ?



ಬಾರ್ತಿಮಯನಿಗೆ ಬೇಕಾಗಿದ್ದು ಕಣ್ಣು. ಅವನು ಯೇಸುವನ್ನು ಮತ್ತು ಅವರು ಮಾಡಿದ ಸೃಷ್ಟಿಯನ್ನು ನೋಡಬೇಕಾಗಿತ್ತು. ಮತ್ತು ಅವನು ಬಿಕ್ಷೆ ಬೇಡುವದನ್ನು ಬಿಟ್ಟು ತನ್ನ ಮೇಲೆ ಕಾಳಜಿಯನ್ನು ಇಟ್ಟುಕೊಳ್ಳಲು ಬಯಸಿದನು.



ಯೇಸುವು ಬಾರ್ತಿಮಯನಿಗೆ ನಿನ್ನ ವಿಶ್ವಾಸದಂತೆ ನಿನಗಾಗಲಿ ಅಂದನು ಆತನಿಗೆ ಕಣ್ಣು ಬಂದಿತು.



ಆತನಿಗೆ ಕಣ್ಣು ಬಂದ ಕೂಡಲೆ
ಯೇಸುವನ್ನು ಹಿಂಬಾಲಿಸಿದನು.
ನೋಡುವವರೇಲ್ಲರು ಇದು
ಆದ್ಭುತ, ಆತಿಶಯ
ಎಂದರು. ಆ ಕ್ಷಣವು
ಬಾರ್ತಿಮಯನಿಗೆ
ಆದ್ಭುತ
ಸಮಯವಾಗಿತ್ತು.



ನೋಡುವವರೆಲ್ಲರು ಇದು
ಆದ್ಭುತ, ಆತಿಶಯ ಎಂದು
ದೇವರನ್ನು ಕೊಂಡಾಡಿದರು.
ಮತ್ತು ಕುರುಡನಿಗೆ ಕಣ್ಣು
ಕೊಟ್ಟಂತಹ ಆತಿಶಯಯುಳ್ಳ
ದೇವರ ಮಗನಾದ
ಯೇಸುವನ್ನು ಕಂಡರು.



# ಯೇಸುವು ಕುರುಡನನ್ನು ಗುಣ ಪಡಿಸಿದ್ದು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

**ಮಾರ್ಕ 10, ಲೂಕ 18, ಯೋಹಾನ 9**

**"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."**
**ಕೀರ್ತನೆ 119:130**

# ಮುಕ್ತಾಯ

50

60

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16